

ಡಾ. ಎಸ್. ರಾಮಮೂರ್ತಿ

# 8-10-2015ರಿಂದ 14-10-2015ರವರೆಗೆ




ಕೆಲಸ ಕಾರ್ಯಗಳಲ್ಲಿ ಆರಂಭದಲ್ಲಿ ಮಂದಗತಿಯಿದ್ದರೂ ಅಂತ್ಯದಲ್ಲಿ ಯಶಸ್ಸು ದೊರೆಯುವುದು. ವ್ಯಾಪಾರದಲ್ಲಿ ಕ್ರಮೇಣ ಹೆಚ್ಚು ಲಾಭ ಲಭಿಸುವ ಸಾಧ್ಯತೆ. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ವಿರೋಧಿಗಳು ರಾಜಿಯಾಗುವ ಸಂಭವ. ಗುರು ಹಿರಿಯರೊಡನೆ ಸಮಾಲೋಚನೆ. ಸಂದೇಶದಿಂದ ಕುಟುಂಬದಲ್ಲಿ ಸಂತಸ. ಶುಭದಿನ: 11; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಕೋಪ. ಹಣದ ವಿಚಾರವಾಗಿ ವಿವಾದ. ಸೋದರರಿಂದ ಅಸಹಕಾರ. ಉದ್ಯೋಗದಲ್ಲಿ ಒತ್ತಡ. ವ್ಯಾಪಾರದಲ್ಲಿ ಹಾನಿ. ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಅನುಕೂಲ, ಮನಶಾಂತಿ. ಆತ್ಮೀಯರ ಆಗಮನ. ಅಲ್ಪ ಶ್ರಮದಿಂದ ಕಾರ್ಯಸಿದ್ಧಿ. ಲೇವಾದೇವಿಗಳಲ್ಲಿ ಲಾಭ. ಶುಭದಿನ: 12; ದುರ್ಗಾ, ಗುರು ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಧೈರ್ಯ. ವಿಶ್ವಾಸದಿಂದ ಕಾರ್ಯನಿರ್ವಹಣೆ. ವ್ಯಾಪಾರದಲ್ಲಿ ಲಾಭ. ಪ್ರೀತಿ ಪಾತ್ರರ ಭೇಟಿ. ಹಿತ ಸುದ್ದಿ. ವಾರದ ಮಧ್ಯಭಾಗದಲ್ಲಿ ಆತಂಕ. ನಿರ್ಧಾರ ತೆಗೆದುಕೊಳ್ಳಲು ಹಿನ್ನಡೆ. ಅಧಿಕಾರಿ ವರ್ಗದವರಿಂದ ಸಹಕಾರದ ಕೊರತೆ. ಉದ್ಯೋಗ ವೃತ್ತಿಗಳಲ್ಲಿ ಬೇಸರ. ಅನಾವಶ್ಯಕ ಖರ್ಚು. ವಾರಾಂತ್ಯದಲ್ಲಿ ಸುಧಾರಣೆ. ಶುಭದಿನ: 9; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ.




ವಾರದ ಮಧ್ಯಭಾಗದವರೆಗೂ ಶಾಂತಿ ಸಮಾಧಾನ. ನಿರೀಕ್ಷೆಯಂತೆ ಕಾರ್ಯ ಸಾಧನೆ. ವಿದ್ಯಾಭ್ಯಾಸದಲ್ಲಿ ಮುನ್ನಡೆ. ವ್ಯಾಪಾರದಲ್ಲಿ ಲಾಭ. ಬಂಧು ಮಿತ್ರರಿಂದ ಹೊಗಳಿಕೆ. ಪ್ರಯಾಣ ಸೌಖ್ಯ. ಗಣ್ಯರೊಂದಿಗೆ ಸಮಾಲೋಚನೆ. ವಾರಾಂತ್ಯದಲ್ಲಿ ಆತಂಕ. ವಸ್ತುಗಳು ಕೈಯಿಂದ ಜಾರಿಬೀಳುವ ಸಾಧ್ಯತೆ. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ಶುಭದಿನ: 10; ಗಣಪತಿ, ಗುರು ಅಷ್ಟೋತ್ತರ ಪಠಿಸಿ.




ಒತ್ತಡ ನಿವಾರಣೆಯಾಗಿ ಮನಶಾಂತಿ. ಮನೋಬಲ ಹೆಚ್ಚುವುದು. ಉದ್ಯೋಗದಲ್ಲಿ ಸಮಾಧಾನ. ಹಣದ ಸಮಸ್ಯೆ ಬಗೆಹರಿಯುವುದು. ವಾಹನ ಯಂತ್ರೋಪಕರಣಗಳು ಅಡಚಣೆಯಿಲ್ಲದೆ ನಡೆಯುವುದು. ಪ್ರೀತಿಪಾತ್ರರ ಸಹಾಯ. ವಿದೇಶಿ ವ್ಯವಹಾರಗಳು ಸುಸೂತ್ರವಾಗಿ ನಡೆಯುವುದು, ಪತ್ರಾಗಮನ. ಶುಭದಿನ: 11; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಒತ್ತಡ. ಹಿರಿಯರೊಂದಿಗೆ ವಿವಾದ. ಕೆಲಸಗಳು ಸಮಯಕ್ಕೆ ಸರಿಯಾಗಿ ಮುಗಿಯುವುದಿಲ್ಲ. ವಿಪರೀತ ಶ್ರಮ. ವಾರದ ಮಧ್ಯಭಾಗದಿಂದ ಅನುಕೂಲ. ಉತ್ಸಾಹ ಹೆಚ್ಚುವುದು. ವೃತ್ತಿ ಪ್ರವೃತ್ತಿಗಳಲ್ಲಿ ಸಫಲತೆ. ಆಪ್ತರಿಂದ ಸಹಾಯ. ಖರ್ಚು ನಿಯಂತ್ರಣಕ್ಕೆ ಬರುವುದು. ಕ್ರೀಡೆಗಳಲ್ಲಿ ಆಸಕ್ತಿ ಹೆಚ್ಚುವುದು. ಶುಭದಿನ: 12; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಸಂತಸ. ಗಣ್ಯರಿಂದ ಪ್ರಶಂಸೆ. ನಿರೀಕ್ಷೆಯಂತೆ ಕಾರ್ಯ ಸಾಧನೆ. ಹಿತಕರ ಘಟನೆಗಳು. ವ್ಯವಹಾರಗಳಲ್ಲಿ ಲಾಭ. ವಾರದ ಮಧ್ಯಭಾಗದಲ್ಲಿ ಆತಂಕ. ಸೋದರ ವರ್ಗದವರ ಮೇಲೆ ಸಿಟ್ಟು. ಉದ್ಯೋಗದಲ್ಲಿ ಅವಸರ ತಪ್ಪಾಗುವಿಕೆ. ವ್ಯಾಪಾರದಲ್ಲಿ ಹಿನ್ನಡೆ. ಅನಾವಶ್ಯಕ ಖರ್ಚು. ವಾರಾಂತ್ಯದಲ್ಲಿ ಅನುಕೂಲ. ಶುಭದಿನ: 9; ದುರ್ಗಾ, ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ.




ವಾರದ ಮಧ್ಯಭಾಗದವರೆಗೂ ಅಭಿವೃದ್ಧಿ, ಸ್ಥಿರ ಮನಸ್ಸು. ಶತ್ರುಭೀತಿ ದೂರವಾಗುವುದು. ಲೇವಾದೇವಿಗಳಲ್ಲಿ ಲಾಭ. ಸಭೆ ಸಮಾರಂಭಗಳಲ್ಲಿ ಭಾಗವಹಿಸುವಿಕೆ. ಅಪಾಯದಿಂದ ಪಾರಾಗುವಿಕೆ. ಹಿತಕರ ಭೋಜನ. ಸಂತಸದ ಸುದ್ದಿ. ವಾರಾಂತ್ಯದಲ್ಲಿ ಕಷ್ಟ. ಆರೋಗ್ಯ ವ್ಯತ್ಯಯ. ಕುಟುಂಬ ಸದಸ್ಯರಿಂದ ಅಸಹಕಾರ. ಅಕಾಲ ಪ್ರಯಾಣ. ಶುಭದಿನ: 10; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಹಿಂಜರಿಕೆ. ಮಕ್ಕಳಿಂದ ಒತ್ತಡ. ವೃತ್ತಿ ಪ್ರವೃತ್ತಿಗಳಲ್ಲಿ ಅಸಮಾಧಾನ. ವಿರೋಧಿಗಳಿಂದ ಉಪದ್ರವ. ವಾರದ ಮಧ್ಯಭಾಗದಿಂದ ಅನುಕೂಲ. ಮನೋಬಲ ಹೆಚ್ಚುವುದು. ನಿರೀಕ್ಷೆಯಂತೆ ಕಾರ್ಯ ಸಫಲತೆ. ಲೇವಾದೇವಿಗಳಲ್ಲಿ ಲಾಭ. ಆರೋಗ್ಯ ಸುಧಾರಣೆ ಪ್ರಯಾಣ ಸೌಖ್ಯ. ಶುಭದಿನ: 13; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಸೋಮಾರಿತನ. ಆರೋಗ್ಯ ವ್ಯತ್ಯಯ. ಉದ್ಯೋಗದಲ್ಲಿ ಒತ್ತಡ. ಲೇವಾದೇವಿಗಳಲ್ಲಿ ಹಾನಿ. ವಾರದ ಮಧ್ಯಭಾಗದಿಂದ ಅನುಕೂಲ. ತಾಳ್ಮೆ ಹೆಚ್ಚುವುದು. ಕಾರ್ಯಕಲಾಪಗಳು ನಿರೀಕ್ಷೆಯಂತೆ ನಡೆಯುವುದು. ವ್ಯಾಪಾರದಲ್ಲಿ ಸೂಕ್ತ ಲಾಭ. ಆತ್ಮೀಯರೊಂದಿಗೆ ಸಮಾಲೋಚನೆ. ಪ್ರಯಾಣ ಸೌಖ್ಯ. ಶುಭದಿನ: 13; ಗುರು, ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಸೌಖ್ಯ. ಸಂತಸದ ಸುದ್ದಿ. ಶ್ರಮವಿಲ್ಲದ ಕಾರ್ಯ ಸಾಧನೆ. ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ. ಕ್ರಯ ವಿಕ್ರಯಗಳಲ್ಲಿ ಲಾಭ. ವಾರದ ಮಧ್ಯಭಾಗದಲ್ಲಿ ಬೇಸರದ ಘಟನೆಗಳು, ಅನಾರೋಗ್ಯ. ಕುಟುಂಬ ಸದಸ್ಯರ ಮೇಲೆ ಕೋಪತಾಪ, ಅಧಿಕಶ್ರಮ. ವ್ಯಾಪಾರದಲ್ಲಿ ಹಿನ್ನಡೆ. ವಾರಾಂತ್ಯದಲ್ಲಿ ಧೈರ್ಯ, ಮನಶಾಂತಿ. ಶುಭದಿನ: 9; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ.




ವಾರದ ಮಧ್ಯಭಾಗದವರೆಗೂ ಸೌಖ್ಯ. ನಿರೀಕ್ಷೆಯಂತೆ ಕಾರ್ಯ ಸಿದ್ಧಿ. ವ್ಯಾಪಾರದಲ್ಲಿ ಲಾಭ. ಸೋದರ ವರ್ಗದವರಿಂದ ಸಹಾಯ. ಹಣದ ಸಮಸ್ಯೆ ಬಗೆಹರಿಯುವುದು. ಪಾಲುದಾರಿಕೆ, ಏಜೆನ್ಸಿಗಳಲ್ಲಿ ಪ್ರಗತಿ. ಗೌರವ ಪ್ರಾಪ್ತಿ. ವಾರಾಂತ್ಯದಲ್ಲಿ ಒತ್ತಡ. ಚಂಚಲ ಮನಸ್ಸು. ಆರೋಗ್ಯ ವ್ಯತ್ಯಯ. ಉದ್ಯೋಗ ವೃತ್ತಿಗಳಲ್ಲಿ ಅಶಾಂತಿ. ಶುಭದಿನ: 10; ಗಣಪತಿ, ಸರಸ್ವತಿ ಅಷ್ಟೋತ್ತರ ಪಠಿಸಿ.